**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ**

**ಸಿಸಿ ನಂ 155/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 22-07-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಶ್ರೀಧರ | **ಪ್ರಾ.ಸಾ ಃ 03** |
| **ತಂದೆ ಃ ಗಂಡ ಹೆಸರು** | ಃ | ಅಪ್ಪಾಸಾಬ ಗುಗ್ಗರಿ | **ಚಾ.ಸಾ ಃ 05** |
| **ವಯಸ್ಸು** | ಃ | 32 ವರ್ಷ | |
| **ಉದ್ಯೋಗ** | ಃ | ಪಿ ಸಿ ನಂ 558, ಧಾರವಾಡ ಗ್ರಾಮೀಣ ಪೋಲೀಸ ಠಾಣೆ | |
| **ವಾಸಸ್ಥಳ** | ಃ | ಧಾರವಾಡ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು 2019 ರಿಂದ ಜೂನ್ 2024 ರವರೆಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆ ಎಂದು ಕರ್ತವ್ಯನಿರ್ಹಿಸಿದ್ದೇನೆ.

ದಿನಾಂಕ 05-09-2022 ರಂದು ರಾತ್ರಿ 8-10 ಗಂಟೆಗೆ ಇಲಾಖಾ ವಾಹನ ನಂ 2 ಕೆಎ 25/ಜಿ 483 ನೇದ್ದರಲ್ಲಿ ಚಾಸಾ-1 ಹಾಗೂ 4 ರವರ ಜೊತೆಗೆ ಗಣಪತಿ ಹಬ್ಬದ ನಿಮಿತ್ಯ ಬಿ ಗುಡಿಹಾಳ ಗ್ರಾಮದಲ್ಲಿ ಪೆಟ್ರೂಲಿಂಗ್ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರಿಗೆ ಪೋಲೀಸ ಇನ್ಸಪೇಕ್ಟರವರು ಕರೆ ಮಾಡಿ ಜೋಡಳ್ಳಿ ಕ್ರಾಸದಿಂದ ಗಂಬ್ಯಾಪುರ ರಸ್ತೆ ಮಾರ್ಗದಲ್ಲಿ ಒಬ್ಬ ವ್ಯಕ್ತಿ ಮೋಟರ ಸೈಕಲ ಮೇಲೆ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿದ್ದಾನೆಂದು ಮಾಹಿತಿ ನೀಡಿರುತ್ತಾರೆ. ಸದರಿ ಸೂಚನೆ ಮೇರೆಗೆ ಚಾಸಾ-1 ರವರು ನನ್ನನ್ನು ಹಾಗೂ ಚಾಸಾ-4 ರವರನ್ನು ಕರೆದುಕೊಂಡು ಗಂಬ್ಯಾಪುರ ಗ್ರಾಮದ ಕಡೆಗೆ ಹೋಗಿದ್ದು ಅಲ್ಲಿ ಇಬ್ಬರು ಪಂಚರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳದ ಸಮೀಪ ಹೋಗಿ ನಮ್ಮ ಜೀಪನ್ನು ನಿಲ್ಲಿಸಿ ಮರೆಯಲ್ಲಿ ನಿಂತು ನೋಡುವಾಗ ಒಬ್ಬ ವ್ಯಕ್ತಿ ಮೋಟರ ಸೈಕಲ ಮೇಲೆ ಬಂದಿದ್ದು ಆತನನ್ನು ತಡೆಯಲು ಪ್ರಯತ್ನಿಸಿದಾಗ ಸದರಿ ವ್ಯಕ್ತಿ ಓಡಿ ಹೋಗಲು ಪ್ರಯತ್ನಿಸಿದ್ದು ನಾನು ಹಾಗೂ ಚಾಸಾ-4 ರವರು ಹಿಡಿದುಕೊಂಡಿರುತ್ತೇವೆ. ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಮಲ್ಲಿಕಾರ್ಜುನ ಗುರುಸಿದ್ದಯ್ಯ ಚಿಕ್ಕಮಠ ಎಂದು ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಪರಿಶೀಲನೆ ಮಾಡಿದಾಗ ಕೈ ಚೀಲದಲ್ಲಿ ಓರಿಜನಲ್ ಚಾಯ್ಸ ಡಿಲಕ್ಸ ವಿಸ್ಕಿಯ 90 ಮಿಲೀಯ 48 ಟೆಟ್ರಾ ಪ್ಯಾಕೆಟಗಳು, ಮ್ಯಾಕೀನತೋಷ ಗ್ರೀನ್ ವಿಸ್ಕಿ 90 ಮೀಲಿಯ 24 ಟೆಟ್ರಾ ಪ್ಯಾಕೇಟಗಳು ಸಿಕ್ಕಿರುತ್ತವೆ. ಸದರಿ ಮಾಲು ಸಾಗಾಣಿಕೆ ಮಾಡಲು ಯಾವುದೆ ಪರವಾನಿಗೆ ಹೊಂದಿರಲಿಲ್ಲ. ಮೋಟರ ಸೈಕಲ ನಂಬರ ಕೆಎ 32/ಇಪಿ 2036 ಬಜಾಜ ಕಂಪನಿಗೆ ಸೇರಿದ ವಾಹನ ಆಗಿರುತ್ತದೆ. ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸದರಿ ವಸ್ತುಗಳಿಗೆ ಇಲಾಖಾ ಮೊಹರ ಲಗತ್ತಿಸಿ ಮಾದರಿ ಮೋಹರಿನ ಚೀಟಿ ಅಂಟಿಸಲಾಗಿರುತ್ತದೆ. ಸ್ಥಳದಲ್ಲಿ 9-10 ರಿಂದ 10-10 ರವರೆಗೆ ಪಂಚನಾಮೆ ಜರುಗಿಸಿರುತ್ತೇವೆ. ಮುದ್ದೆ ಮಾಲನ್ನು ಹಾಗೂ ವಾಹನವನ್ನು ವಶಕ್ಕೆ

ಪಡೆದುಕೊಂಡು ಠಾಣೆಗೆ ತೆಗೆದುಕೊಂಡು ಬಂದಿರುತ್ತೇವೆ. ಚಾಸಾ-1 ರವರು ಮುಂದಿನ ಕ್ರಮ ಜರುಗಿಸಿರುತ್ತಾರೆ. ದಾಳಿ ಸಮಯದಲ್ಲಿ ಜಪ್ತಿ ಪಡಿಸಿಕೊಂಡ ಮುದ್ದೆಮಾಲು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು-1 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ದಾಳಿ ಸಮಯದಲ್ಲಿ ಹಿಡಿದುಕೊಂಡ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಈ ಕುರಿತು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಡಿ ಪರ ಶ್ರೀ ಬಿ ಟಿ ಡಿ ವಕೀಲರಿಂದಃ</u>**

ನಮಗೆ ಬಂದ ಮಾಹಿತಿ ಮೇರೆಗೆ ದಾಳಿ ಸಲುವಾಗಿ ಸ್ಥಳಕ್ಕೆ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಳಿ ಮಾಡಿದ ಸ್ಥಳ ಸಾರ್ವಜನಿಕ ಸ್ಥಳವಾಗಿದ್ದು ಅಲ್ಲಿ ಸಾಕಷ್ಟು ವಾಸದ ಮನೆಗಳು ಇರುತ್ತವೆ ಅಂದರೆ ಸರಿಯಲ್ಲ. ಸ್ಥಳಿಯರನ್ನು ನಾವು ವಿಚಾರಣೆ ಮಾಡಿರುವುದಿಲ್ಲ. ನಾವು ರಸ್ತೆ ಕಾವಲು ಮಾಡುತ್ತಿದ್ದಾಗ ಆರೋಪಿ ಮೋಟರ ಸೈಕಲ ಮೇಲೆ ಬಂದಿದ್ದು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ಪರಿಶೀಲನೆ ಮಾಡಿ ಕೈಚೀಲದಿಂದ ಮುದ್ದೆಮಾಲುಗಳನ್ನು ಜಪ್ತಿ ಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಆರೋಪಿಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಠಾಣೆಯ ಅಂಕಿಸಂಖ್ಯೆಗೋಸ್ಕರ ಚಾಸಾ-1 ರವರು ಪ್ರಕರಣ ದಾಖಲಿಸಿದ್ದು ಅದಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**